# ಆಹಾ ಸುದ್ದಿ!

★ ಸಸಿತೋಟ



ಮೆಕ್ಸಿಕೋದಲ್ಲಿ ‘ಸತ್ತವರ ದಿನ’ ಆಚರಣೆಗೆ ಇರುವ ಹೆಸರು ‘ಎಲಬಿನ ಗೂಡುಗಳ ಹಬ್ಬ’. ಅದಕ್ಕೆಂದೇ ಅಮೆರಿಕಾದ ಕಲಾವಿದ ಸ್ಪೆನ್ಸರ್ ಟ್ಯುನಿಕ್ ಬಿಳಿ ಪರದೆಯ ಮರೆಯಲ್ಲಿರುವ ಮಾಂಸ ಅಂಟಿದ ಮೂಳೆಗಳ ಹಂದರಗಳ ಫೋಟೊ ತೆಗೆದು ಹಬ್ಬದ ಆಚರಣೆ ಮಾಡಿದ. ಇದಕ್ಕೆ ಆತ ಇಟ್ಟಿರುವ ಹೆಸರು ‘ಸ್ಪಿರಿಟ್’. ಅಂದರೆ ಆತ್ಮವೆಂದಾದರೂ ಅರ್ಥೈಸಿಕೊಳ್ಳಿ, ಹುಮ್ಮಸ್ಸು ಎಂದು ಬೇಕಾದರೂ ಅಂದುಕೊಳ್ಳಿ. ಇದು ಚಿತ್ರ ನೋಡುವವರ ಭಾವನೆಗಳಿಗೆ ಬಿಟ್ಟಿದ್ದು.

ಅಮೆರಿಕಾದ ಕ್ಲೀವ್‌ಲೆಂಡ್‌ನ ಶೇನಾ ರಸ್ತೆಯಲ್ಲಿ ನಿಂತಿರುವ ಶಾಲಾ ಬಸ್‌ಅನ್ನು ತಪ್ಪಿಸಲು ಪಾದಚಾರಿ ಮಾರ್ಗಕ್ಕೆ ಕಾರನ್ನು ನುಗ್ಗಿಸಿದಳು. ದಂಡ, ಲೈಸನ್ಸ್ ರದ್ದು ಎಲ್ಲವೂ ಆಯ್ತು. ಅಷ್ಟಕ್ಕೇ ನಿಂತಿಲ್ಲ ಆಕೆಗೆ ಕೊಟ್ಟ ಶಿಕ್ಷೆ. ಎರಡು ದಿನಗಳವರೆಗೆ ನಿತ್ಯ ಒಂದು ಗಂಟೆ ಕಾಲ ಅದೇ ಜಾಗದಲ್ಲಿ ‘ದಡ್ಡಿ (ಈಡಿಯಟ್) ಮಾತ್ರ ಪಾದಚಾರಿ ಮಾರ್ಗಕ್ಕೆ ಕಾರು ನುಗ್ಗಿಸುತ್ತಾಳೆ’ ಎಂಬ ಫಲಕ ತೊಟ್ಟುಕೊಂಡು ನಿಲ್ಲುವ ಶಿಕ್ಷೆ ವಿಧಿಸಿದರಂತೆ ನ್ಯಾಯಾಧೀಶರು. ಬೆಂಗಳೂರಲ್ಲೂ ಈ ಬಗೆಯ ಶಿಕ್ಷೆ ಇದ್ದಿದ್ದರೆ, ಯಾರ್‍ಯಾರ ಬಳಿ ವಾಹನ ಇರುತ್ತದೋ ಅವರೆಲ್ಲಾ ದಡ್ಡರೋ/ ಮೂರ್ಖರೋ ಎಂದು ಕಣ್ಮುಚ್ಚಿ ಹೇಳಬಹುದು.

ಈ ಜಗತ್ತಿನಲ್ಲಿರುವ ಭಾರಿ ಸಾಲಗಾರನೆಂದರೆ ಅಮೆರಿಕಾದ ಮಾಜಿ ಹಣಕಾಸು ವಹಿವಾಟುದಾರ ಕೆರ್‌ವೀಲ್. 6.3 ಶತಕೋಟಿ ಡಾಲರ್ ಸಾಲ ಆತನ ತಲೆ ಮೇಲಿದೆಯಂತೆ. ಅದೂ ಅಲ್ಲಿಯ ಫ್ರೆಂಚ್ ಬ್ಯಾಂಕ್ ಒಂದರಲ್ಲೇ ಆತ ಮಾಡಿದ ಸಾಲವಂತೆ. ಈ ಹಣ ಸಾಲವಾಗದೇ ಆಸ್ತಿಯಾಗಿದ್ದರೆ, ಅಮೆರಿಕಾದ 50 ಸಿರಿವಂತರ ಪಟ್ಟಿಯಲ್ಲಿ ಸೇರಿಕೊಳ್ಳುತ್ತಿದ್ದ. ಸದ್ಯ ಸಾಲದ ಶೂಲದ ಇರಿತವಿಲ್ಲದೇ ಕೆರ್‌ವೀಲ್ ಆರಾಮವಾಗಿದ್ದಾನೆ. 2015ರವರೆಗೂ ಈ ಶೂಲ ಇರಿಯದೇ ಸುಮ್ಮನೆ ಕೂಡ್ರುತ್ತದೆ. ಏಕೆಂದರೆ ಆತ ಸದ್ಯ ವಂಚನೆ ಅಪರಾಧದ ಮೇಲೆ ಜೈಲಿನಲ್ಲಿದ್ದು, 2015ರಲ್ಲಿ ಬಿಡುಗಡೆಯಾದ ನಂತರವಷ್ಟೇ ಸಾಲ ಮರುಪಾವತಿ ಮಾಡುವ ಬಗ್ಗೆಯೋ, ಟೋಪಿ ಹಾಕುವ ಕುರಿತೋ ಆಲೋಚನೆ ಮಾಡಲು ಅವಕಾಶವನ್ನು ಬ್ಯಾಂಕ್ ನೀಡಿದೆ.



ಅವಘಡದಲ್ಲಿ ಕಾಲು ಕಳೆದುಕೊಂಡಿದ್ದ ಅಮೆರಿಕಾದ ಜ್ಯಾಕ್ ಸುಮ್ಮನೆ ಆಲೋಚಿಸುತ್ತ ಕೂಡ್ರಲಿಲ್ಲ. ಆಲೋಚನೆಗಳಿಂದಲೇ ನಿಯಂತ್ರಿಸಬಲ್ಲ ಯಾಂತ್ರಿಕ (ಬಯೋನಿಕ್) ಕಾಲಿನ ನೆರವಿನಿಂದಲೇ ವಾಷಿಂಗ್ಟನ್ನಿನ 103 ಅಂತಸ್ತುಗಳುಳ್ಳ ವಿಲ್ಲಿಸ್ ಕಟ್ಟಡವನ್ನು ಏರಿ ಸಾಧನೆ ಮಾಡಿದ. ಇದೇನು ಮಹಾ! ಜ್ಯಾಕ್ ಯಾಂತ್ರಿಕ ಕಾಲನ್ನು ನಿಯಂತ್ರಿಸಿದರೆ, ನನ್ನಾಕೆ ನನ್ನ ಆಲೋಚನೆಗಳನ್ನೇ ನಿಯಂತ್ರಿಸಬಲ್ಲಳು ಎಂದು ಗಯ್ಯಾಳಿಯ ಗಂಡ ತನ್ನಲ್ಲೇ ಅಂದುಕೊಂಡನಂತೆ.



ಚೀನಾದ ಸಿಝುವಾನ್ ಪ್ರಾಂತ್ಯದ ಶತಾಯುಷಿ ದಂಪತಿ. 101 ವರ್ಷಗಳ ವು ಕೋಂಗನ್ ಮತ್ತು 103ರ ಹರೆಯದ ಆತನ ಪತ್ನಿ ಮದುವೆಯಾಗಿ 88 ವರ್ಷಗಳಲ್ಲಿ ಇದೇ ಮೊದಲ ಬಾರಿ ಮದುವೆ ಉಡುಪಿನಲ್ಲಿ ಫೋಟೊ ತೆಗೆಸಿಕೊಂಡರಂತೆ. 88 ವರ್ಷಗಳ ಕಾಲ ಒಟ್ಟಿಗೆ ಇರುವುದಾ, ಒಂದೇ ಮುಖವನ್ನು 88 ವರ್ಷಗಳ ಕಾಲ ನೋಡಿಕೊಂಡಿರುವುದಾ ಎಂದು ನಾಲ್ಕಾರು ವರ್ಷಗಳಲ್ಲೇ ವಿಚ್ಛೇದನ ಅರ್ಜಿ ತುಂಬುವವರು ಮೂಗಿನ ಮೇಲೆ ಬೆರಳಿಟ್ಟಾರು.



ಪೋಲೆಂಡ್ ರಾಜಧಾನಿ ವಾರ್ಸಾದಲ್ಲಿರುವ ಜಗತ್ತಿನ ಅತ್ಯಂತ ಕಿರಿದಾದ ಕಟ್ಟಡದ ಮಲಗುವ ಕೊಠಡಿಯಿದು. ಕಟ್ಟಡದ ಅಗಲ ಕೇವಲ 92 ಸೆಂ.ಮೀ. (3 ಅಡಿ). ಇಸ್ರೇಲ್ ಲೇಖಕ ಎಡ್ಗರ್ ಕೆರೆಟ್ ವರ್ಷಕ್ಕೆರಡು ಬಾರಿ ಪೋಲೆಂಡ್‌ಗೆ ಭೇಟಿ ನೀಡಿದಾಗ ವಾಸಿಸುವರಂತೆ. ಭಾರಿ ಭಾರಿ ಬಂಗ್ಲೆಯಲ್ಲಿ ವಾಸಿಸಿದವರಿಗೆ ಕೂಡಾ ಕೊನೆಯಲ್ಲಿ ಮಲಗಲು ಬೇಕಾಗುವ ಜಾಗ ಮೂರಡಿ, ಆರಡಿಯೇ. ಅದಕ್ಕೇ ಆಮೇಲೆ ಕಿರಿಕಿರಿಯಾಗಬಾರದೆಂದು ಕೆರೆಟ್ ಈಗಾಗಲೇ ಈ ಇಕ್ಕಟ್ಟಿನ ಜಾಗದಲ್ಲಿ ಮಲಗಿ ಅಭ್ಯಾಸ ಮಾಡಿಕೊಳ್ಳುತ್ತಿರಬಹುದೆ?